ಬಾರಿ ವಿದ್ಯುತ್ ದರಗಳನ್ನು ಪರಿಷ್ಕರಿಸಲಾಗಿರುತ್ತದೆ. ವಿದ್ಯುತ್ ದರಗಳ ಶೇಕಡವಾರು ಹೆಚ್ಚಳದ ವಿವರಗಳು ಈ ಕೆಳಕಂಡಂತಿವೆ.

	ಶೇಕಡವಾರು ಹೆಚ್ಚಳ
ಟ್ಯಾರಿಫ್ ಆರ್ಡರ್ – 2000	16.85
ಟ್ಯಾರಿಫ್ ಆರ್ಡರ್ – 2002	16.85
ಟ್ಯಾರಿಫ್ ಆರ್ಡರ್ – 2003	2.02

ಇ) ಗೃಹ ಬಳಕೆ, ಸರ್ವ ವಿದ್ಯುತ್, ಕೈಗಾರಿಕೆ, ವಾಣಿಜ್ಯ ಹಾಗೂ ಕೃಷಿ ಬಳಕೆಯ ವಿದ್ಯುತ್ ದರದ ಹೆಚ್ಚಳದ ಶೇಕಡವಾರು ವಿವರಗಳು ಈ ಕೆಳಕಂಡಂತಿದೆ:

	ಟ್ಯಾರಿಫ್ ಆರ್ಡರ್– 2000	ಟ್ಯಾರಿಫ್ ಆರ್ಡರ್– 2002	ಟ್ಯಾರಿಫ್ ಆರ್ಡರ್– 2003
ಗೃಹ ಬಳಕೆ	31	31	ವಿಲೀನ
ಸರ್ವ ವಿದ್ಯುತ್	31	12	ಗೊಳಿಸಿದೆ 5.23
ಕೈಗಾರಿಕೆ	18	12	1.53
ವಾಣಿಜ್ಯ	–7	3	6.03
ಕೃಷಿ ಬಳಕೆ (10 ಹೆಚ್.ಪಿ. ಮತ್ತು ಅದಕ್ಕಿಂತ ಕಡಿಮೆ ಇರುವ ಸ್ಥಾವರಗಳು)	ನೀರಾವರಿ ಪಂಪು ಸೆಟ್ಟುಗಳಿಗೆ 2000ರ ವಿದ್ಯುತ್ ದರ ಪರಿಷ್ಕರಣೆಯಲ್ಲಿ ನಿಗದಿ ಪಡಿಸಲಾಗಿರುವ ರೂ 540/– (ಪ್ರತಿ ಅಶ್ವಶಕ್ತಿಗೆ ವಾರ್ಷಿಕ ದರ)ಕ್ಕೆ ಇಳಿಸಿ ವ್ಯತ್ಯಾಸದ ಹಣವಾದ ರೂ 240 ನ್ನು ವಾರ್ಷಿಕ ಪ್ರತಿ ಅಶ್ವ ಶಕ್ತಿಗೆ) ಸಹಾಯ ಧನದ ರೂಪದಲ್ಲಿ ಸರ್ಕಾರ ಭರಿಸಿದೆ. 2002ರ ವಿದ್ಯುತ್ ದರ ಪರಿಷ್ಕರಣೆಯಲ್ಲಿ ನಿಗದಿ ಪಡಿಸಲಾಗಿರುವ ರೂ. 720/–ನ್ನು ಹಿಂದಿನ ದರವಾದ ರೂ 540/- (ಪ್ರತಿ ಅಶ್ವ ಶಕ್ತಿಗೆ ವಾರ್ಷಿಕ ದರ) ಕ್ಕೆ ಇಳಿಸಿ ವ್ಯತ್ಯಾಸದ ಹಣವಾದ ರೂ. 180/– ವಾರ್ಷಿಕ ಪ್ರತಿ ಅಶ್ವ ಶಕ್ತಿಗೆ) ನ್ನು ಸಹಾಯ ಧನದ ರೂಪದಲ್ಲಿ ಸರ್ಕಾರ ಭರಿಸುವುದು	ಇಲ್ಲ

ರಾಜ್ಯದಲ್ಲಿ ವಿಚಾರಣೆಗೆ ಒಳಗಾಗಿರುವ ಸರ್ಕಾರಿ ನೌಕರರು

3449 (4012) : ಶ್ರೀ ಡಾ: ನಾರಾಯಣಪ್ಪ ಜೆ.ಡಿ (ಹೊಸನಗರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ನೌಕರರು ತಮ್ಮ ಸೇವಾವಧಿಯಲ್ಲಿ ಹಲವಾರು ಕಾರಣಗಳಿಂದ ವಿಚಾರಣೆಗೊಳಪಟ್ಟು ನಂತರ ವಿಚಾರಣೆಗಳು ಪೂರ್ಣಗೊಳ್ಳಲು ಕಾಲಮಿತಿ ಏನಾದರೂ ಇದೆಯೇ;

ಆ) ವಿವಿಧ ಪ್ರಾಧಿಕಾರಿಗಳ ಮುಂದೆ ಇಂತಹ ವಿಚಾರಣೆಗಳು ಇತ್ಯರ್ಥವಾಗದೇ ಇರುವ ಸಂಖ್ಯೆ ಎಷ್ಟು;

ಇ) ನೌಕರರು ನಿವೃತ್ತಿ ಹೊಂದಿದರೂ ಕೂಡ ಇತ್ಯರ್ಥವಾಗದೇ ಇರುವ ಪ್ರಕರಣಗಳು ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಹೌದು

ಆ) ಲಭ್ಯವಿರುವ ಮಾಹಿತಿಯ ಪ್ರಕಾರ 2197 ಪ್ರಕರಣಗಳು ಇತ್ಯರ್ಥವಾಗಬೇಕಿದೆ.

ಇ) ಲಭ್ಯವಿರುವ ಮಾಹಿತಿಯ ಪ್ರಕಾರ 305 ಪ್ರಕರಣಗಳು ಬಾಕಿ ಇವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಲಾನಯನ ಇಲಾಖೆಗೆ ಬಿಡುಗಡೆಯಾದ ಹಣ

3451 (3528) : ಶ್ರೀ ಬಿಆರ್. ನೀಲಕಂಠಪ್ಪ (ತರೀಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಜಲಾನಯನ ಇಲಾಖೆಯಲ್ಲಿ 2000–01, 2001–02 ಮತ್ತು 2002–03 ಈ ಮೂರು ವರ್ಷ ಗಳಲ್ಲಿ ಎಷ್ಟು ಹಣ ವಿನಿಯೋಗಿಸಲಾಗಿದೆ. ಮೂರು ವರ್ಷಗಳ ಕಾಮಗಾರಿಗಳ ವಿವರ ಮತ್ತು ಮೊತ್ತ ತಿಳಿಸುವುದು.

ಆ) ತರೀಕೆರೆ ಜಲಾನಯನ ಇಲಾಖೆ ವ್ಯಾಪ್ತಿಯಲ್ಲಿ ಭದ್ರಾ ಕಾಡಾ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಜಲಾನಯನ ಇಲಾಖೆಗೆ ಬಿಡುಗಡೆಯಾದ ಹಣವೆಷ್ಟು? ಕಾಮಗಾರಿಗಳ ವಿವರ ನೀಡುವುದು?

ಶ್ರೀ ವಿ. ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿ ಜಲಾನಯನ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಒಟ್ಟು 1963.05 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಇದರ ಕಾಮಗಾರಿವಾರು ವೆಚ್ಚದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ತರೀಕೆರೆ ಜಲಾನಯನ ಇಲಾಖೆ ವ್ಯಾಪ್ತಿಯಲ್ಲಿ ಭದ್ರಾ ಕಾಡಾ ವತಿಯಿಂದ 2001–02 ಹಾಗೂ 2002–03ನೇ ಸಾಲಿನಲ್ಲಿ ಒಟ್ಟು 24.86 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಇದರಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ವರ್ಷ	ಬಿಡುಗಡೆಯಾದ ಅನುದಾನ	ಕೈಗೊಳ್ಳಲಾದ ಕಾಮಾಗಾರಿ	ಮಾಡಲಾದ ವೆಚ್ಚ (ಲಕ್ಷ ರೂ. ಗಳಲ್ಲಿ)
2001–02	7.65	ಬಸಿಗಾಲುವ್ (5 ಬ್ಲಾಕ್)	7.65
2002–03	17.21	ಬಸಿಗಾಲುವೆ (11 ಬ್ಲಾಕ್)	15.49
ಒಟ್ಟು	24.86	16	23.14